ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೬

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೇ ಅಧಿವೇಶನ

ಬುಧವಾರ, ದಿನಾಂಕ: ೧೨ನೇ ಮಾರ್ಚ್, ೨೦೨೫

---

### ಸಮೂಹ – III

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ದಂಡದ ಮೊತ್ತ ಪಾವತಿಸದ ಬಿಲ್ಡರ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೭೬ (೬೧೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಿಯಲ್ ಎಸ್ಟೇಟ್ ಅಭಿವೃದ್ಧಿ ಮತ್ತು ನಿಯಂತ್ರಣ ಕಾಯಿದೆಯ ಮಾನದಂಡಗಳು ಮತ್ತು ನಿಯಮಗಳೇನು ; ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ವಿಧಿಸುವ ಪರಿಹಾರ ಮೊತ್ತ ಎಷ್ಟು ;

(ಆ) 'ಕೆ–ರೇರಾ' ಈವರೆಗೆ ವಿಧಿಸಲಾದ ದಂಡದ ಮೊತ್ತವೆಷ್ಟು ಹಾಗೂ ಎಷ್ಟು ಜನ ಬಿಲ್ಡರ್‌ಗಳಿಗೆ ದಂಡ ವಿಧಿಸಿದೆ ;

(ಇ) ಇದರಿಂದ ವಸೂಲಿ ಆದ ಮತ್ತು ಆಗದೇ ಉಳಿದಿರುವ ಮೊತ್ತ ಎಷ್ಟು ; ಬಾಕಿ ಉಳಿಯಲು ಕಾರಣಗಳೇನು ;

(ಈ) ಹಾಗಿದ್ದಲ್ಲಿ, ಸಂಬಂಧಪಟ್ಟ ಬಿಲ್ಡರ್‌ಗಳ ವಿರುದ್ಧ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳದಿರಲು ಪ್ರಮುಖ ಕಾರಣಗಳೇನು ; ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳದಿರಲು ಯಾರದಾದ್ರು ಒತ್ತಡವಿದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಪರಿಣಾಮಕಾರಿಯಾಗಿ ಸರ್ಕಾರ ಕ್ರಮ ತೆಗೆದುಕೊಳ್ಳುವುದು ?

## ಸರ್ಕಾರದ ಕಛೇರಿ ಆವರಣದಲ್ಲಿರುವ ಮರಗಳನ್ನು ಕಟಾವುಗೊಳಿಸುತ್ತಿರುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೭ (೬೩೫) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಜಿ.ಎಫ್. ತಾಲ್ಲೂಕು ಬೇತಮಂಗಲದಲ್ಲಿ ಇರುವ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಯ ಆವರಣದಲ್ಲಿದ್ದ ಹೆಚ್ಚಿನ ಮೌಲ್ಯದ ಮರಗಳನ್ನು ಅರಣ್ಯ ಇಲಾಖೆಯ ಅನುಮತಿ ಇಲ್ಲದೇ ಕಟಾವು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸರ್ಕಾರದ ಆವರಣದಲ್ಲಿರುವ ಮರಗಳನ್ನು ಕಟಾವು ಮಾಡುವ ಮುಂಚಿತವಾಗಿ ಮರಗಳ ಮೌಲ್ಯವನ್ನು ನಿಗದಿಪಡಿಸಬೇಕಾಗಿರುತ್ತದೆ ಎಂಬುದರ ಬಗ್ಗೆ ಸರ್ಕಾರದಲ್ಲಿ ನಿಯಮಗಳಿಲ್ಲವೇ ; (ವಿವರ ನೀಡುವುದು)

(ಇ) ಈ ಕಛೇರಿಯ ಆವರಣದಲ್ಲಿ ಕಳೆದ ೧ ವರ್ಷದಿಂದ ಕಟಾವು ಮಾಡಿರುವ ಮರಗಳ ತಳಿಂಯು ವಿವರ ನೀಡುವುದು ; ಎಷ್ಟು ಮೌಲ್ಯ ನಿಗದಿಪಡಿಸಲಾಗಿತ್ತು ; ಕಡಿದ ಮರಗಳನ್ನು ಯಾವ ರೀತಿ ಮಾರಾಟ ಮಾಡಲಾಗಿದೆ ; ಬಂದ ಆದಾಯ ಎಷ್ಟು ; (ಸಂಬಂಧಪಟ್ಟ ಇಲಾಖೆಗಳಿಂದ ಪಡೆದ ಅನುಮತಿ ವಿವರಗಳನ್ನು ದಾಖಲೆಗಳೊಂದಿಗೆ ನೀಡುವುದು)

(ಈ) ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಸರ್ಕಾರಿ ಕಛೇರಿಯ ಆವರಣದಲ್ಲಿರುವ ಆಸ್ತಿಗೆ ಧಕ್ಕೆ ಉಂಟಾಗಿರುವುದಕ್ಕೆ ಹೊಣೆ ಯಾರು ; ಈ ರೀತಿಯ ಕಾನೂನುಬಾಹಿರ ಕ್ರಮದ ಬಗ್ಗೆ ಸರ್ಕಾರವು ಸಂಬಂಧಪಟ್ಟವರ ಮೇಲೆ ಯಾವ ಕ್ರಮಗಳನ್ನು ತೆಗೆದುಕೊಳ್ಳುವುದು ?

## ರಾಜ್ಯದಲ್ಲಿ ವಸತಿ ಯೋಜನೆಯಡಿ ನಿರ್ಮಾಣವಾಗಿರುವ ಮನೆಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೮ (೬೪೩) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷದಿಂದ ರಾಜ್ಯದಲ್ಲಿ ಯಾವ ಯಾವ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ ; (ಯೋಜನೆವಾರು ವಿವರ ಒದಗಿಸುವುದು)

(ಆ) ಕಳೆದ ಸರ್ಕಾರದಲ್ಲಿ ವಿವಿಧ ಯೋಜನೆಯಡಿ ಹಂಚಿಕೆಯಾದ ಮನೆಗಳನ್ನು ಪೂರ್ಣಗೊಳಿಸಿ ಹಂಚಿಕೆ ಮಾಡಲಾಗಿದೆಯೇ ; ಹಾಗಿದ್ದರೆ, ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ ; (ವಿವರ ಒದಗಿಸುವುದು)

(ಇ) ಬಹುಮಹಡಿ ವಸತಿ ಸಮುಚ್ಚಯಗಳ ಯೋಜನೆಯಡಿ ಎಷ್ಟು ಮನೆಗಳನ್ನು ಎಲ್ಲೆಲ್ಲಿ ನಿರ್ಮಾಣ ಮಾಡಲಾಗಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಈ) ಕೆ.ಹೆಚ್.ಬಿ.ಯಿಂದ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ ; ಸದರಿ ಮನೆಗಳ ನಿರ್ಮಾಣಕ್ಕೆ ಎಷ್ಟು ಅನುದಾನ ನೀಡಲಾಗಿದೆ ? (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು)

## ಸೇತುವೆ ನಿರ್ಮಾಣದ ಬಗ್ಗೆ

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೭೯ (೭೦೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತೇರದಾಳ ವಿಧಾನಸಭಾ ಕ್ಷೇತ್ರದ ಢವಳೇಶ್ವರ ಗ್ರಾಮದಲ್ಲಿ ಹರಿಯುವ ಮಲಪ್ರಭ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಂಜೂರಾಗಿದೆಯೇ ; ಯಾವಾಗ ಮಂಜೂರು ಮಾಡಲಾಗಿದೆ ;

(ಆ) ಪ್ರಾರಂಭದಲ್ಲಿ ಈ ಸೇತುವೆ ನಿರ್ಮಾಣಕ್ಕೆ ಕಾಯ್ದಿರಿಸಿದ ಅನುದಾನವೆಷ್ಟು ; ಇದರ ಕಾಮಗಾರಿ ಕೈಗೊಳ್ಳಲು ಭೂಮಿ ಪೂಜೆ ನೆರವೇರಿಸಲಾಗಿದೆಯೇ ; ಹಾಗಿದ್ದಲ್ಲಿ, ಯಾವಾಗ ನೆರವೇರಿಸಲಾಗಿದೆ ;

(ಇ) ಢವಳೇಶ್ವರ ಸೇತುವೆ ಮಂಜೂರಾದ ಮೂಲ ನಕ್ಷೆಯಂತೆ ನಿರ್ಮಾಣವಾಗುತ್ತಿದೆಯೇ ಅಥವಾ ನಕ್ಷೆ ಬದಲಾಗಿದೆಯೇ ; ಹೌದಾದರೆ, ನಕ್ಷೆ ಬದಲಾದ ನಂತರ ಕಾಮಗಾರಿಗೆ ಕಾಯ್ದಿರಿಸಿದ ಅನುದಾನದಲ್ಲಿ ಬದಲಾವಣೆ ಮಾಡಲಾಗಿದೆಯೇ ?

## ಮುಜರಾಯಿ ಇಲಾಖೆಯ ದೇವಸ್ಥಾನಗಳ ಹುಂಡಿ ಹಣ ಬಳಕೆ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೮೦ (೬೬೯) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆಯ ಅಧೀನದಲ್ಲಿರುವ ದೇವಸ್ಥಾನಗಳ ಹುಂಡಿ ಮತ್ತು ಭಕ್ತರು ನೆರವೇರಿಸುವ ಸೇವೆಯಿಂದ ಸಂಗ್ರಹಿಸಲಾದ ಹಣವನ್ನು ಯಾವ ಯಾವ ಕಾರ್ಯಗಳಿಗೆ ಬಳಸಲಾಗುತ್ತದೆ ; ಮುಜರಾಯಿ ದೇವಸ್ಥಾನಗಳಿಂದ ಕಳೆದ ೩ ವರ್ಷಗಳಲ್ಲಿ ಸರ್ಕಾರಕ್ಕೆ ಬಂದ ಆದಾಯವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ದೇವಸ್ಥಾನಗಳನ್ನು ನಮ್ಮ ಪೂರ್ವಜರು ನಂಬಿಕೆ ಮತ್ತು ವಿಶ್ವಾಸದ ಆಧಾರದ ಮೇಲೆ ನಿರ್ಮಿಸಲಾಗಿದ್ದು ಸರ್ಕಾರವು ಮೂಢನಂಬಿಕೆ ನಿಷೇಧ ಕಾಯಿದೆಯನ್ನು ಜಾರಿಗೆ ತಂದಲ್ಲಿ ಅದರ ಫಲ ಜೋತಿಷ್ಯದ ಮೇಲೆ ಪರಿಣಾಮ ಬೀರುವುದರಿಂದ ದೇವಸ್ಥಾನಗಳಲ್ಲಿ ನಡೆಯುವ ಪೂಜೆ ಮತ್ತು

ಸೇವೆಗಳ ಮೇಲೆ ಪರಿಣಾಮ ಬೀರಿ ದೇವಸ್ಥಾನಗಳ ಆದಾಯ ಕಡಿಮೆಯಾಗುವ ಸಾಧ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ರಾಜ್ಯದಿಂದ ಚಾರ್ ಧಾಮ ಯಾತ್ರೆ, ಅಮರನಾಥ ಮತ್ತು ಮಾನಸ ಸರೋವರ ಯಾತ್ರೆ ಕೈಗೊಳ್ಳುವ ಎಷ್ಟು ಭಕ್ತಾದಿಗಳು ಸಬ್ಸಿಡಿ ಮೊತ್ತ ಮಂಜೂರು ಮಾಡುವಂತೆ ಕೋರಿ ಕಳೆದ ೨ ವರ್ಷಗಳಲ್ಲಿ ಮನವಿ ಸಲ್ಲಿಸಿರುತ್ತಾರೆ; ಇದರಲ್ಲಿ ಎಷ್ಟು ಯಾತ್ರಿಕರಿಗೆ ಸಬ್ಸಿಡಿ ಮಂಜೂರಾಗಿದೆ ; ಮಂಜೂರಾದ ಒಟ್ಟು ಸಬ್ಸಿಡಿ ಮೊತ್ತವೆಷ್ಟು ; ಎಷ್ಟು ಮನವಿಗಳು ಬಾಕಿ ಇವೆ ?

**ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ಕುರಿತು**

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೮೧ (೬೫೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ಬಗ್ಗೆ ಬಂದಿರುವ ದೂರುಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

(ಆ) ಸದರಿ ಭೂಮಿಯ ಅಂದಾಜು ಮೌಲ್ಯವೆಷ್ಟು ; ಮತ್ತು ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ; (ಪ್ರಕರಣವಾರು ಮಾಹಿತಿ ನೀಡುವುದು)

(ಇ) ಇಲ್ಲಿಯವರೆಗೆ ಎಷ್ಟು ಸರ್ಕಾರಿ ಭೂಮಿಯನ್ನು ಮರುವಶಪಡಿಸಿಕೊಳ್ಳಲಾಗಿದೆ ; ಹಾಗೂ ವಶಪಡಿಸಿಕೊಂಡ ಭೂಮಿಯನ್ನು ಯಾವ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ಮತ್ತು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ ; (ಪ್ರಕರಣವಾರು ಮಾಹಿತಿ ನೀಡುವುದು)

(ಈ) ಸರ್ಕಾರಿ ಭೂಮಿ ಒತ್ತುವರಿ ತಡೆಯಲು ಮತ್ತು ಭೂಮಿಯನ್ನು ಸಂರಕ್ಷಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು ?

## ರಾಜ್ಯದಲ್ಲಿ ಲಭ್ಯವಿರುವ ಸರ್ಕಾರಿ ಜಮೀನುಗಳ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೮೨ (೬೩೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಲಭ್ಯವಿರುವ ಸರ್ಕಾರಿ ಜಮೀನುಗಳ ವಿಸ್ತೀರ್ಣ ಎಷ್ಟು ; (ವಿವರಗಳನ್ನು ಜಿಲ್ಲಾವಾರು/ತಾಲ್ಲೂಕುವಾರು/ಹೋಬಳಿವಾರು/ಗ್ರಾಮವಾರು ಸರ್ವೆ ನಂಬರ್‌ಗಳು ಸೇರಿದಂತೆ ಜಮೀನಿನ ಎಕರೆವಾರು ವಿವರವಾದ ಮಾಹಿತಿಯನ್ನು ಒದಗಿಸುವುದು)

(ಆ) ಸರ್ಕಾರಿ ಜಮೀನು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಎಕರೆ ಒತ್ತುವರಿಯಾಗಿದೆ ; (ಒತ್ತುವರಿಯಾಗಿರುವ ಸರ್ಕಾರಿ ಜಮೀನಿನ ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಇಲ್ಲಿಯ ತನಕ ಒತ್ತುವರಿಯಾಗಿರುವ ಎಷ್ಟು ಎಕರೆ ಸರ್ಕಾರಿ ಜಮೀನುಗಳನ್ನು ಕಂದಾಯ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗಿದೆ ; (ಈ ಬಗ್ಗೆ ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಸರ್ಕಾರಿ ಜಮೀನುಗಳನ್ನು ಸಂರಕ್ಷಿಸಲು ಕಂದಾಯ ಇಲಾಖೆ ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ; (ವಿವರಣೆ ನೀಡುವುದು)

(ಉ) ದೂರ ದೃಷ್ಟಿಯನ್ನಿಟ್ಟುಕೊಂಡು ಸರ್ಕಾರದ ವಿವಿಧ ಇಲಾಖೆಗಳ ಅಭಿವೃದ್ಧಿಗೆ/ಕಟ್ಟಡಗಳನ್ನು ನಿರ್ಮಿಸಲು ಇನ್ನಿತರೆ ಸೌಲಭ್ಯಗಳಿಗಾಗಿ ಲಭ್ಯವಿರುವ ಸರ್ಕಾರಿ ಜಮೀನುಗಳನ್ನು ವಿವಿಧ ಇಲಾಖೆಗಳನ್ನು ಭಾಗೀದಾರರನ್ನಾಗಿ ಮಾಡಿಕೊಂಡು ಹಂಚಿಕೆ ಮಾಡಿದ್ದಲ್ಲಿ, ಈ ಸರ್ಕಾರಿ ಜಮೀನುಗಳನ್ನು ಸಂರಕ್ಷಿಸಲು ಸಾಧ್ಯವಾಗುವುದಲ್ಲವೆ ; ಈ ಬಗ್ಗೆ ಸರ್ಕಾರದ ಚಿಂತನೆ ಏನು ? (ವಿವರಣೆ ನೀಡುವುದು)

## ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಕಂಕನವಾಡಿ ನಡುಗಡ್ಡೆ ಜನರ ಪ್ರಯಾಣಕ್ಕೆ ಆಗಿರುವ ತೊಂದರೆಯ ಬಗ್ಗೆ

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೮೩ (೬೦೮) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆ ಪ್ರದೇಶದಲ್ಲಿ ಕೃಷ್ಣಾ ನದಿಯ ಮಹಾಪೂರದಿಂದ ನಡುಗಡ್ಡೆಯ ಜನರ ಪ್ರಯಾಣಕ್ಕೆ ಹಾಗೂ ಸದರಿ ಭಾಗದಲ್ಲಿ ಬೆಳೆದ ಕಬ್ಬು ಹಾಗೂ ಇತರೆ ಬೆಳೆಗಳನ್ನು ಸಾಗಿಸಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಸದರಿ ನಡುಗಡ್ಡೆಯ ಪ್ರದೇಶದಲ್ಲಿ ದೊಡ್ಡ ದೋಣಿಯನ್ನು ನೀಡಲು ಇರುವ ಅಡಚಣೆಗಳೇನು ; ಮತ್ತು ಎಲ್‌ಸಿಟಿ ಬಾರ್ಜ್/ಮಿನಿಎಲ್‌ಸಿಟಿ ಬಾರ್ಜ್ ನೀಡುವ ಚಿಂತನೆ ಸರ್ಕಾರದ ಮುಂದಿದೆಯೇ ; ಯಾವ ಕಾಲಮಿತಿಯೊಳಗೆ ನೀಡಲಾಗುವುದು ;

(ಇ) ಕಂಕನವಾಡಿ ನಡುಗಡ್ಡೆಗೆ ರಸ್ತೆ ಸಂಪರ್ಕ ಇರದ ಕಾರಣ ಹಾಗೂ ರೈತರ ಹಿತದೃಷ್ಟಿಯಿಂದ ದೊಡ್ಡ ಎಲ್‌ಸಿಟಿ ಬಾರ್ಜ್/ಮಿನಿಎಲ್‌ಸಿಟಿ ಬಾರ್ಜ್ ನೀಡಿ ರೈತರ ಹಿತ ಕಾಪಾಡಲು ಸರ್ಕಾರದ ನಿಲುವೇನು ;

(ಈ) ಈ ನಡುಗಡ್ಡೆಯ ರೈತರು ತಾವು ಬೆಳೆದ ಬೆಳೆಗಳನ್ನು ಸಾಗಿಸಲು ನದಿ ದಾಟಿ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ನೋವಿನ ಸಂಗತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ; ಬಂದಿದ್ದರೆ, ಈ ಕುರಿತು ಸರ್ಕಾರದ ಸ್ಪಷ್ಟನೆ ಏನು ? (ವಿವರ ನೀಡುವುದು)

## ಗದಗ–ಬೆಟಗೇರಿ ನಗರದ ಗಂಗಿಮಡಿ ಭಾಗದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿ ಗುಂಪು ಮನೆ ನಿರ್ಮಾಣ ಯೋಜನೆ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೮೪ (೭೦೮) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗದಗ–ಬೆಟಗೇರಿ ನಗರದ ಗಂಗಿಮಡಿ ಭಾಗದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ ; ಈ ಯೋಜನೆಯಲ್ಲಿ ಕೇಂದ್ರ ಹಾಗೂ ರಾಜ್ಯಗಳ ಹಣಕಾಸಿನ ಪಾಲು ಎಷ್ಟು ಇದೆ ;

(ಆ) ಗುಂಪು ಮನೆ ನಿರ್ಮಾಣ ಯೋಜನೆಯನ್ನು ಯಾವ ವರ್ಷ ಪ್ರಾರಂಭಿಸಲಾಗಿದೆ ಹಾಗೂ ಪೂರ್ಣಗೊಳಿಸಲು ನಿಗದಿಪಡಿಸಿದ ವರ್ಷ ಯಾವುದು ; ಈ ಯೋಜನೆ ಅಡಿ ಪೂರ್ಣಗೊಂಡಿರುವ ಮನೆಗಳೆಷ್ಟು ಹಾಗೂ ಅದರಲ್ಲಿ ಹಂಚಿಕೆ ಮಾಡಿದ ಮನೆಗಳೆಷ್ಟು ;

(ಇ) ಈ ಗುಂಪು ಮನೆ ನಿರ್ಮಾಣ ಯೋಜನೆ ಕಾರ್ಯ ವಿಳಂಬವಾಗಿದೆ ಎಂದು ಆಪಾದನೆ ಮಾಡುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ವಿಳಂಬವಾಗಲು ಕಾರಣವೇನು ; (ವಿವರಣೆ ನೀಡುವುದು)

(ಈ) ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿ ಗುಂಪು ಮನೆ ನಿರ್ಮಾಣ ಹಾಗೂ ಹಂಚಿಕೆ ಕಾರ್ಯ ಯಾವಾಗ ಪೂರ್ಣಗೊಳಿಸಲಾಗುವುದು ?

## ರಾಜ್ಯದ ಸಾರಿಗೆ ನಿಗಮಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೮೫ (೭೧೦) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸಾರಿಗೆ ನಿಗಮಗಳು ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ನಷ್ಟ ಅನುಭವಿಸುತ್ತಿರುವ ಕುರಿತು ಆರ್ಥಿಕ ಪುನಶ್ಚೇತನಕ್ಕೆ ಸರ್ಕಾರದ ಯೋಜನೆಗಳಾವುವು ; ಸರ್ಕಾರಿ ಬಸ್ ನಿಗಮಗಳ ನಷ್ಟವನ್ನು ತಡೆಯಲು ರೂಪಿಸಿರುವ ಯೋಜನೆಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಗ್ರಾಮೀಣ ಪ್ರದೇಶಗಳಲ್ಲಿ ಬಸ್ ಸೇವೆಗಳ ಕೊರತೆಯನ್ನು ತಪ್ಪಿಸಲು ಸರ್ಕಾರ ಹೊಸ ಬಸ್‌ಗಳನ್ನು ನೀಡುವ ಯೋಜನೆ ಇದೆಯೇ ; ಇದ್ದರೆ, ಎಷ್ಟು ಬಸ್‌ಗಳನ್ನು ನೀಡುವುದು ;

(ಇ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಎಷ್ಟು ಹೊಸ ಬಸ್‌ಗಳನ್ನು ಖರೀದಿಸಿದೆ ; (ನಿಗಮವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ದೀರ್ಘ ಪ್ರಯಾಣದ ಸಂದರ್ಭಗಳಲ್ಲಿ ಶೌಚಾಲಯ ಇಲ್ಲದೆ ಪ್ರಯಾಣಿಕರು ಪರಿತಪಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ದೀರ್ಘ ಪ್ರಯಾಣದ ಬಸ್‌ಗಳಲ್ಲಿ ಶೌಚಾಲಯ ಸೌಲಭ್ಯ ಒದಗಿಸುವ ಯೋಜನೆ ಇದೆಯೇ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಕೊಡಗು ಜಿಲ್ಲೆಯಲ್ಲಿನ ಪೈಸಾರಿ ಜಮೀನುಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೬ (೬೫೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಇರುವ ಪೈಸಾರಿ ಜಮೀನುಗಳ ಸಂಖ್ಯೆ ಎಷ್ಟು ; (ಮಾಹಿತಿಗಳನ್ನು ಒದಗಿಸುವುದು)

(ಆ) ಸದರಿ ಪೈಸಾರಿ ಜಮೀನುಗಳನ್ನು ಭೂ ಮಂಜೂರಾತಿ ಕಾಯ್ದೆ ಅಡಿ ಸಂಬಂಧಿಸಿದವರಿಗೆ ಮಂಜೂರಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿದೆಯೇ ; ಈ ರೀತಿ ಪೈಸಾರಿ ಜಮೀನುಗಳನ್ನು ಮಂಜೂರಾತಿ

ಮಾಡಿಕೊಳ್ಳಲು ಮನವಿಗಳನ್ನು ಸಲ್ಲಿಸಿರುವವರ ಸಂಖ್ಯೆ ಎಷ್ಟು ; ಎಷ್ಟು ಪ್ರಸ್ತಾವನೆಗಳು ಕೊಡಗು ಜಿಲ್ಲೆಯಲ್ಲಿ ಬಂದಿವೆ ; (ಮಾಹಿತಿ ನೀಡುವುದು)

(ಇ) ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನುಗಳನ್ನು ಸಿ ಮತ್ತು ಡಿ ಜಮೀನುಗಳೆಂದು ವರ್ಗೀಕರಿಸಿ ಅಂತಹ ಜಮೀನುಗಳನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿರುತ್ತಾರೆಯೇ ; ನೀಡಿದ್ದಲ್ಲಿ, ಅವುಗಳನ್ನು ಗುರುತಿಸಲು ರೂಪಿಸಿರುವ ನಿಯಮಾವಳಿಗಳೇನು ; ಈ ನಿಯಮಾವಳಿಗಳನ್ವಯ ಸದರಿ ಜಮೀನುಗಳನ್ನು ವರ್ಗೀಕರಿಸಲಾಗಿದೆಯೇ ;

(ಈ) ಜಿಲ್ಲೆಯಲ್ಲಿರುವ ಎಲ್ಲಾ ಪೈಸಾರಿ ಜಮೀನುಗಳನ್ನು ಸರ್ವೆ ಮಾಡಿ ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನುಗಳನ್ನು ಮಾತ್ರ ಅರಣ್ಯ ಇಲಾಖೆಗೆ ವರ್ಗಾಯಿಸುವ ಕುರಿತು ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗುವುದೇ ;

(ಉ) ಅರಣ್ಯ ಇಲಾಖೆಯಿಂದ ಹಸ್ತಾಂತರಗೊಂಡಿರುವ ಹಾಗೂ ಲ್ಯಾಂಡ್ ಬ್ಯಾಂಕ್‌ನಲ್ಲಿ ಉಳಿದಿರುವ ಜಮೀನನ್ನು (ಈ ಹಿಂದಿನ ಪೈಸಾರಿ ಜಮೀನು) ಭೂ ಮಂಜೂರಾತಿ ಕಾಯ್ದೆಯಡಿ ಸಂಬಂಧಿಸಿದವರಿಗೆ ಮಂಜೂರು ಮಾಡಲು ಇರುವ ತೊಡಕುಗಳೇನು ; ಈ ಬಗ್ಗೆ ಸರ್ಕಾರದ ನಿಲುವೇನು ;

(ಊ) ೧೯೯೧ರಲ್ಲಿ ಹಿಂಪಡೆಯಲಾದ ಜಮೀನುಗಳು ಎಂಬ ಮಾನದಂಡವನ್ನು ಹೊರತುಪಡಿಸಿ ಸಾಗುವಳಿಗೆ ಯೋಗ್ಯವಾದ ಎಲ್ಲಾ ಜಮೀನುಗಳನ್ನು ನಮೂನೆ–೫೦, ೫೩ ಮತ್ತು ೫೭ರಡಿ ಮಂಜೂರಾತಿ ಮಾಡಿ ಹಕ್ಕುಪತ್ರ ನೀಡುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು ?

## ೨೦೨೪–೨೫ನೇ ಸಾಲಿನಲ್ಲಿ ರಾಜ್ಯದ ಜಿಲ್ಲೆಗಳಿಗೆ ವಸತಿ ಹಂಚಿಕೆ ಮಾಡಿರುವ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) –**

೮೭ (೭೧೫) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೪–೨೫ನೇ ಸಾಲಿನಲ್ಲಿ ರಾಜ್ಯದ ಜಿಲ್ಲೆಗಳಿಗೆ ವಿವಿಧ ಯೋಜನೆಗಳಲ್ಲಿ ನಿಗದಿಪಡಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು ;

(ಆ) ಈ ಪೈಕಿ ಅಲೆಮಾರಿ ಜನಾಂಗದವರಿಗೆ ನಿಗದಿಪಡಿಸಿರುವ ಮನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿಧಾನಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು)

(ಇ) ವಿವಿಧ ಯೋಜನೆಗಳಡಿ ಮಂಜೂರು ಮಾಡುವ ಮನೆಗಳ ನಿರ್ಮಾಣದ ಘಟಕದ ವೆಚ್ಚವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಎಷ್ಟು ಘಟಕ ವೆಚ್ಚವನ್ನು ನೀಡಲಾಗುವುದು ; ಇಲ್ಲದೇ ಇದ್ದಲ್ಲಿ, ಹಾಲಿ ಇರುವ ಘಟಕ ವೆಚ್ಚದಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಸಾಧ್ಯವೆ ;

(ಈ) ಪ್ರಸ್ತುತ ಮಾರುಕಟ್ಟೆಯಲ್ಲಿ ಸಿಮೆಂಟ್, ಕಬ್ಬಿಣ ಹಾಗೂ ಇತರೆ ಕಟ್ಟಡ ಸಾಮಗ್ರಿಗಳ ಬೆಲೆ ಹಾಗೂ ವೇತನ ದರ ಹೆಚ್ಚಾಗಿರುವುದರಿಂದ ಹಾಲಿ ಸರ್ಕಾರವು ನಿಗದಿಪಡಿಸುವ ಘಟಕ ವೆಚ್ಚದಲ್ಲಿ ನಿರ್ಮಾಣ ಮಾಡಲು ಸಾಧ್ಯವಿದೆಯೇ ; ಘಟಕ ವೆಚ್ಚವನ್ನು ಹೆಚ್ಚಿಸಲು ಸರ್ಕಾರವು ತೆಗೆದುಕೊಳ್ಳುವ ಕ್ರಮವೇನು ?

## ಮೀನುಗಾರಿಕೆ ವಲಯವನ್ನು ಉತ್ತೇಜಿಸುವ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೮೮ (೭೩೪) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮೀನುಗಾರಿಕೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಹೊನ್ನಾವರ ತಾಲ್ಲೂಕಿನ ಮಂಕಿ/ಕಾಸರಗೋಡದಲ್ಲಿ ಮೀನುಗಾರಿಕೆ ಸಂಶೋಧನಾ ಕೇಂದ್ರ ಸ್ಥಾಪನೆ, ಭದ್ರಾವತಿಯಲ್ಲಿ ಅತ್ಯಾಧುನಿಕ ಮೀನು ಮಾರುಕಟ್ಟೆ ಸ್ಥಾಪನೆ, ಅಕ್ವಾ ಪಾರ್ಕ್‌ಗಳ ಸ್ಥಾಪನೆ, ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಸುಸಜ್ಜಿತ ಮೀನುಗಾರಿಕೆ ಹೊರ ಬಂದರು ನಿರ್ಮಾಣ,

ವಿಜಯಪುರದ ಆಲಮಟ್ಟಿಯಲ್ಲಿ ಒಳನಾಡು ಮೀನುಗಾರಿಕೆ ಕೌಶಲ್ಯಾಭಿವೃದ್ಧಿ ಕೇಂದ್ರವನ್ನು ಯಾವಾಗ ಸ್ಥಾಪನೆ ಮಾಡಲಾಗುವುದು ; ಹಿಂದಿನ ಆಯ–ವ್ಯಯದಲ್ಲಿ ಘೋಷಿಸಿದ್ದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ ; ಇದ್ದಲ್ಲಿ, ಕಾಮಗಾರಿಗಳು ಯಾವ ಹಂತದಲ್ಲಿವೆ ;

(ಆ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗುವ ಅನುದಾನವೆಷ್ಟು ಮತ್ತು ಅನುದಾನವನ್ನು ಮೀಸಲಿಡಲಾಗಿದೆಯೇ ;

(ಇ) ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆಯೇ ; ಹಾಗೂ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದೆಯೇ ;

(ಈ) ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಾಗುವುದು ? (ಮಾಹಿತಿ ನೀಡುವುದು)

**ರಾಜ್ಯದ ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ (AC&DC) ಹಾಗೂ ತಹಶೀಲ್ದಾರ್ ಕೋರ್ಟ್‌ನಲ್ಲಿ ಬಾಕಿ ಇರುವ ವ್ಯಾಜ್ಯಗಳ ಬಗ್ಗೆ**

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.) (ವಿಧಾನಸಭೆಯಿಂದ ಚುನಾಯಿತರಾದವರು) –**

೮೯ (೬೨೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ಕೋರ್ಟ್‌ಗಳಲ್ಲಿ ಬಾಕಿ ಇರುವ ಭೂ ವ್ಯಾಜ್ಯಗಳ ಸಂಖ್ಯೆ ಎಷ್ಟು ; ಈ ಪೈಕಿ ಕಳೆದ ೨ ವರ್ಷಕ್ಕಿಂತ ಹೆಚ್ಚು ಅವಧಿಯಿಂದ ಬಾಕಿ ಇರುವ ಪ್ರಕರಣಗಳು ಎಷ್ಟು ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಸದರಿ ನ್ಯಾಯಾಲಯಗಳಲ್ಲಿ ಅಂತಿಮ ವಿಚಾರಣೆ ಪೂರ್ಣಗೊಂಡು ಆದೇಶಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು ; (ಜಿಲ್ಲಾವಾರು ಪ್ರಕರಣಗಳ ವಿವರವನ್ನು ನೀಡುವುದು)

(ಇ) ಭೂಮಿ ವ್ಯಾಜ್ಯ ಪ್ರಕರಣಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಮಾನದಂಡಗಳನ್ನು ರೂಪಿಸಿದೆಯೇ ; ತ್ವರಿತಗತಿಯಲ್ಲಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಸರ್ಕಾರ ನೀಡಿರುವ ಮಾರ್ಗಸೂಚನೆಗಳೇನು ;

(ಈ) ಸರ್ಕಾರದ ಸೂಚನೆ ಪಾಲನೆ ಮಾಡದ ಎಷ್ಟು ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ; ಕಳೆದ ೮ ತಿಂಗಳಿನಿಂದ (೨೦೨೫ ಫೆಬ್ರವರಿ ಅಂತ್ಯದವರೆಗೆ) ಎಷ್ಟು ಭೂ ವ್ಯಾಜ್ಯ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಉ) ಕಳೆದ ೨ ವರ್ಷಗಳಲ್ಲಿ ಹೊಸಕೋಟೆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಡಿ.ಸಿ, ಎ.ಸಿ ಹಾಗೂ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ/ಆದೇಶವಾಗಿವೆ ಹಾಗೂ ಬಾಕಿ ಉಳಿದಿವೆ ? (ಪೂರ್ಣ ಮಾಹಿತಿ ನೀಡುವುದು)

## ರಾಜ್ಯದ ವಸತಿ ಶಾಲೆಗಳಿಗೆ ತೆರಳುವ ಹೆಣ್ಣು ಮಕ್ಕಳ ಪ್ರಯಾಣದ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೯೦ (೬೭೩) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಹಲವು ವಸತಿ ಶಾಲೆಗಳಿಗೆ ವಿದ್ಯಾಭ್ಯಾಸಕ್ಕಾಗಿ ತೆರಳುವ ಹೆಣ್ಣು ಮಕ್ಕಳಿಗೆ ಬಸ್ ಸೌಕರ್ಯ ವ್ಯವಸ್ಥೆ ಇಲ್ಲದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಯಾವ–ಯಾವ ಭಾಗದ ವಸತಿ ಶಾಲೆ ಮಕ್ಕಳಿಗೆ ಈ ರೀತಿಯ ಬಸ್ ಪ್ರಯಾಣವು ಕಷ್ಟಕರವಾಗಿದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಸದರಿ ಮಕ್ಕಳಿಗೆ ಬಸ್ ಪ್ರಯಾಣ ಸೌಕರ್ಯ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಗ್ರಾಮೀಣ ಭಾಗಗಳಲ್ಲಿ ಬಡವರು ಹೆಚ್ಚಾಗಿರುವುದರಿಂದ ಅಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಸತಿ ಶಾಲೆಗಳನ್ನು ಅಲ್ಲಿಯೇ ತೆರೆಯಲು ಸರ್ಕಾರ ಚಿಂತಿಸಿದೆಯೇ ; ಇದ್ದಲ್ಲಿ, ತೆಗೆದುಕೊಂಡ ಕ್ರಮಗಳಾವುವು ?

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು. ಕಾ.ಸೂ.863/ಪಿ5

**List of Questions for Oral Answers**

**Total No. of Questions - 15**

# LIST - 06

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Wednesday, the 12th March, 2025

---

**GROUP - III**

1. Minister for Transport and Muzrai
2. Minister for Public Works
3. Minister for Revenue
4. Minister for Housing, Wakf and Minority Welfare
5. Minister for Animal Husbandry and Sericulture
6. Minister for Fisheries and Ports and Inland Water Transport

---

### ACTION TAKING AGAINST BUILDERS

**Sri. S.L. Bhojegowda (Teachers' Constituency) -**

76 (617) Will the Minister for Revenue be pleased to state:-

a) the Criterias and Rules of Real Estate (Regulation and Development) Act; the amount of compensation which is imposed by the Karnataka Real Estate Regulatory Authority;

b) the amount of penalty that has been imposed by K-RERA till date and the number of builders to whom the penalty has been imposed;

c) the amount that has been recovered and remains pending; the reasons for pending;

d) if so, the major reasons for not taken up the action effectively against the concerned builders; whether there is any pressure from any one for not taken action effectively; if so, the timelimit within which the step would be taken by the Government effectively?

**CUTDOWN TREES IN THE PREMISES OF GOVERNMENT OFFICE**

**Sri. M.L. Anil Kumar (Local Authorities Constituency) -**

77 (635 ) Will the Minister for Fisheries and Ports and Inland Water Transport be pleased to state:-

a) whether it has come to the notice of the Government that the trees which have excessive price have been cut down without the permission of Forest Department which are in the premises of the office of Assistant Director of Fisheries which is located in Betamangala of K.G.F taluk;

b) whether is there any rules in the Government regarding the price of trees would be fixed before cut down the trees which are in the premises of the Government offices; (details be furnished)

c) the details of species of trees that have been cut down during the last one year in the premises of this office be furnished; the details of the price which has been fixed; the manner in which the cut down trees have been sold; the revenue accured thereof; (the details of permission obtained from the concerned Department along with the documents be furnished)

d) the person who is responsible for causing the damage of property in the premises of the Government office by violating the Government Rules; the actions that would be taken by the Government regarding such kind of illegal act?

## HOUSES CONSTRUCTED UNDER HOUSING SCHEME IN THE STATE

**Sri. K.S. Naveen (Local Authorities Constituency) -**

78 (643) Will the Minister for Housing, Wakf and Minority Welfare be pleased to state:-

a) the number of houses that have been constructed under various schemes in the State during the last 2 years; (schemewise details be furnished)

b) whether the houses that have been allotted under various schemes in the previous Government by completing the same; if so, the number of houses that have been allotted; (details be furnished)

c) the particulars of places where the number of houses have been constructed under Multi Storied Housing Complexes Scheme; (complete details be furnished)

d) the number of houses that have been constructed by the Karnataka Housing Board; the grant that has been provided for construction of the said houses ? (Assembly constituency wise details be furnished)

## REGARDING CONSTRUCTION OF BRIDGE

**Dr. Umashree (Nominated) -**

79(705) Will the Minister for Public Works be pleased to state:-

a) whether the construction of bridge across the Malaprabha river which is flowing in Dhavaleshwar village of Terdal Assembly Constituency has been sanctioned; the date on which the same has been sanctioned;

b) the grant that has been earmarked for the construction of this bridge in the initial stage; whether the Bhoomi Pooja has been carried out to undertake the said work; if so, the date on which the same has been carried out;

c) whether Dhavaleshwar bridge is being constructed as per the original plan or the plan has been modified; if so, after the plan has modified, whether the earmarked grant for the work also modified?

## USE OF THE AMOUNT OF TEMPLES HUNDI

**Smt. Bharathi Shetty (Nominated) -**

80 (669) Will the Minister for Transport and Muzrai be pleased to state:-

a) the particulars of works for which the amount of temples hundi and the offering that has been collected from the sevas performed by the devotees coming under the Muzrai Department will be ulitised; the revenue that has been accrued to the exchequer of the Government from the Muzrai temples during the last 3 years; (distractwise information be furnished)

b) the temples are built by our ancestors on the foundation of their belief and faith, if Prohibition of Superstition Act is enforced by the Government, it would affect astrology, whether it has come to the notice of the Government that there is a possibility of the revenue of temples will be reduced by affecting the pooja rituals and devotional activities which are performed in the temples; the step taken by the Government in this regard;

c) the number of devotees who will undertake the Char Dham, Amarnath and Manasa Sarovar Yatra from the State have submitted requisition by seeking for sanction of the subsidy amount during the last 2 years; out of which, the number of pilgrims to whom the subsidy has been sanctioned; the total amount of subsidy that has been sanctioned; the number of pending requisitions?

## ENCROACHMENT OF GOVERNMENT LAND IN BENGALURU URBAN DISTRICT

**Sri. Sharavana T.A (Elected by Legislative Assembly) -**

81 (656) Will the Minister for Revenue be pleased to state:-

a) the number of complaints that have been received with regard to encroachment of Government land in Bengaluru Urban District during the last 3 years; (talukwise and yearwise information be furnished)

b) the estimated value of the said land; and the particulars of steps taken by the Government for the eviction of the encroachment; (casewise information be furnished)

c) the extent of Government land that has been taken into possession again till date; and the particular of purpose for which the same has been utilized and intended to be utilized; (casewise information be furnished)

d) the particulars of measures taken by the Government to prevent the encroachment of Government land and protect the same?

## GOVERNMENT LANDS AVAILABLE IN THE STATE

**Sri. T.N.Javarayi Gowda (Elected by Legislative Assembly) -**

82 (631) Will the Minister for Revenue be pleased to state:-

a) the extent of Government lands which are available in the State; (the detailed information of acrewise land including districtwise/talukwise/hobliwise/villageswise survey numbers be furnished)

b) the extent of acres of Government land that has been encroached in various districts; (districtwise/talukwise information of Government land has been encroached be furnished)

c) the extent of acres of encroached Government lands have been taken into the possession by the Revenue Department till date; (districtwise information in this regard be furnished)

d) the particulars of steps taken by the Revenue Department to protect the Government lands; (details be furnished)

e) if available Government lands which have been allotted for the development/construction of the buildings and other facilities of various Departments of the Government by making various Departments accountable by keeping the foresight whether it is possible to protect these Government lands; the contemplation of the Government in this regard? (details be furnished)

## THE PROBLEM FOR MOVEMENT OF PEOPLE OF KANKANWADI ISLAND

**Sri. Nirani Hanamant Rudrappa (Graduates' Constituency) -**

83 (608 ) Will the Minister for Fisheries and Ports and Inland Water Transport be pleased to state:-

a) whether it has come to the notice of the Government that the people of the island are struggling for the movement and transportation of sugarcane and other crops grown by them in the said region due to the flood of Krishna River in the Kankanwadi Island Area of Jamkhandi taluk of Bagalkot District; if so, the steps taken by the Government;

b) the prevailing impediments to provide the large boat in the said island area; and the contemplation is before the Government to provided LCT Barja/Mini LCT Barja; the timelimit within which the same would be provided;

c) the stand of the Government to protect the well being of farmers by providing large LCT Barja/Mini LCT Barja in the interest of farmers due to non connectivity to Kankanwadi Island; (details be furnished)

d) whether it has come to the notice of the Government that the farmers of this island are in painful situation where they have to transport the crops grown by them by crossing the river; if so, the clear stand of the Government in this regard? (details be furnished)

## GROUP HOUSING PROJECTS UNDER PRADHAN MANTRI AWAS YOJANA

**Sri. S.V. Sankanur (Graduates' Constituency) -**

84 (708) Will the Minister for Housing, Wakf and Minority Welfare be pleased to state:-

a) the number of houses for which the plan has been chalkedout for the construction of the houses under Pradhan Mantri Awas Yojana in Gangimadi area of Gadag-Betageri city; the financial share of the Central and State Governments under this project;

b) the year from which Group Housing Project has been commenced and the year that has been prescribed for completion of the same; the number of houses that have been completed under this project and out of which , the number of houses that have been allotted;

c) whether it is true that there is a allegation regarding this Group Housing Project has been delayed; if so, the reason for the same; (details be furnished)

d) the date on which construction of group house and allotment work under Pradhan Mantri Awas Yojana would be completed?

## TRANSPORT CORPORATIONS OF THE STATE

**Sri. Keshava Prasad S (Elected by Legislative Assembly) -**

85 (710) Will the Minister for Transport and Muzrai be pleased to state:-

a) whether it has come to the notice of the Government that Transport Corporations of the State are in loss; the particulars of schemes of the Government for revival of finance with regard to loss is being caused; the schemes that have been chalkedout to prevent the loss of Government Transport Corporations; (complete details be furnished)

b) whether the plan is before the Government to provide the new buses to overcome the lack of bus services in rural areas; if so, the number of buses would be provided;

c) the number of new buses that have been purchased by the Government during the last 3 years; (Corporationwise complete information be furnished)

d) whether it has come to the notice of the Government that passengers are facing hardship without toilets during long journey; whether there is a plan to provide toilet facility in the buses during long journey? (complete information be furnished)

## PAISARI LANDS IN KODAGU DISTRICT

**Sri. Kushalappa M.P. (Suja) (Local Authorities Constituency) -**

86 (658) Will the Minister for Revenue be pleased to state:-

a) the number of paisari lands in Kodagu district; (information be furnished)

b) whether there is a provision in the rules to sanction the said paisari lands for concerned person under Land Grant Act; the number of persons who have submitted requisitions for sanctioning of paisari lands in such manner; the number of proposals have been received in Kodagu district; (information be furnished)

c) whether the direction has been given by the Deputy Commissioner to transfer such lands to the Forest Department by classifying the lands as C and D lands which have not suitable for agriculture; if so, the Rules that have been framed to identify the same; whether the said land have been classified as per the Rules;

d) whether the Government would come forward to take the step with regard to transfer merely the lands which have not suitable for agriculture to the Forest Department by conducting the survey of all paisari lands in the district;

e) the prevailing impediments to sanction the land which has been handed over by the Forest Department and remaining in the land bank (earlier paisari land) for concerned persons under Land Grant Act; the stand of the Government in this regard;

f) excluding the criteria that the lands which have withdrawn in 1991, the clear stand of the Government with regard to providing title deed by sanctioning of all lands which are suitable for agriculture under Form-50,53, and 57?

## REGARDING ALLOTEMENT OF HOUSES

**Sri. D.T. Srinivas (D.T.S.) (Teachers' Constituency) -**

87 (715) Will the Minister for Housing, Wakf and Minority Welfare be pleased to state:-

a) the number of houses that have been prescribed under various schemes for the districts of the State during the year 2024-25;

b) out of which, the number of houses that have been prescribed for nomadic community; (districtwise and Assembly constituencywise information be furnished)

c) whether the proposal is before the Government to enhance the unit cost for the construction of houses

that would be sanctioned under various schemes; the amount of unit cost that would be provided; if not, whether there is a possibility to contruct the houses in the existing unit cost;

d) whether there is a possibility to construct in the unit cost that has been prescribed by the present Government due to the price of cement, iron and other building materials and wages have been increased in the market at present; the steps to be taken by the Government to enhance the unit cost?

## PROMOTION OF FISHERIES SECTOR

**Sri. Nagaraju M (Elected by Legislative Assembly) -**

88 (734 ) Will the Minister for Fisheries and Ports and Inland Water Transport be pleased to state:-

a) the date on which the Fisheries Research Centre at Manki/Kasargod of Honnavara taluk, Modern Fish Market and Aqua Parks at Bhadravati, construction of well equipped fisheries outer port at Murudeshwar of Bhatkal taluk, Inland Fisheries Skill Development Centre at Alamatti of Vijayapur have been established for the over all development of fisheries in the State; whether the works that have been taken up which have declared in the previous budget; if so, the present stage of the works;

b) the required grant for the completion of these works and whether the grant has been earmarked;

c) whether the tender has been invited for the said works; and whether the contractors have been selected;

d) the date on which these works would be open for public by completing the same? (information be furnished)

## PENDING LITIGATIONS IN THE STATE

**Sri. N. Nagaraju (M.T.B.) (Elected by Legislative Assembly) -**

89(623) Will the Minister for Revenue be pleased to state:-

a) the number of land litigations which have been pending in the courts of Deputy Commissioner, Special Deputy Commissioner, Assistant Commissioner and Tahsildar across the State; out of which, the number of cases which have been pending more than 2 years; (districtwise details be furnished)

b) the number of cases which have been pending for the order by completing final trial in the said courts; (the details of districtwise cases be furnished)

c) whether the criterias have been chalkedout by the Government to complete the land litigation cases in the time frame; the details of the guidelines issued by the Government for rapid disposal of the same;

d) the number of Assistant Commissioners and Tahsildars who are not comply with the instruction of the Government against to whom the action has been taken; , the number of land litigation cases that have been setteled (till the end of February 2025) during the last 8 months; (districtwise details be furnished)

e) the number of cases that have been filed/ordered and pending in the courts of DC, AC and Tahsildar with regard to Hoskote taluk during the last 2 years? (complete information be furnished)

## TRAVELLING OF GIRLS FOR RESIDENTIAL SCHOOLS

**Sri. K. Abdul Jabbar. (Elected by Legislative Assembly) -**

90 (673) Will the Minister for Transport and Muzrai be pleased to state:-

a) whether it has come to the notice of the Government that the hardship is being faced by the girls who are travelling for the education purpose to various residential schools of the State without bus facility;

b) if so, the particulars of regions of the Residential School Children to whom the bus travel is difficult in this manner; (complete information be furnished)

c) the measures taken by the Government to provide the bus facility for the said children; (complete information be furnished)

d) whether the Government has contemplation for commencement of the residential schools in their vicinity for the education of children since there are more poor people in the rural regions; if so, the steps taken in this regard?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru. WD- Copies